# All India Radio: Bangalore
# National Bulletin In Kannada
# 26.10.2026  07.35 a.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**26.10.2026  07.35 a.m.**

**<><><><>**

ಮುಖ್ಯಾಂಶಗಳು

1. ನವದೆಹಲಿಯಲ್ಲಿ ಇಂದಿನಿಂದ ಹನ್ನೆರಡನೇ ಬ್ರಿಕ್ಸ್ ಸಂಸದೀಯ ವೇದಿಕೆ ಸಭೆ ಆರಂಭ
2. ೨೦೨೯ ರ ವೇಳೆಗೆ ಭಾರತದ ಬಾಹ್ಯಾಕಾಶ ಕಾರ್ಯಾಚರಣೆ ಗಮನಾರ್ಹ ವಿಸ್ತರಣೆ - ಇಸ್ರೋ ಅಧ್ಯಕ್ಷ ವಿ.ನಾರಾಯಣನ್
3. ರಾಜ್ಯ ನೀತಿಯ ಸಾಧನವಾಗಿ ಭಯೋತ್ಪಾದನೆ ಬಳಸುವುದು ಸ್ವೀಕಾರಾರ್ಹವಲ್ಲ - ಕೇಂದ್ರ ಸಚಿವ ಡಾ. ಎಸ್.ಜೈಶಂಕರ್ ಪ್ರತಿಪಾದನೆ
4. ೨೦೪೭ ರ ವೇಳೆಗೆ ಭಾರತದ ಬಂದರು ಸಾಮರ್ಥ್ಯ ನಾಲ್ಕು ಪಟ್ಟು ಹೆಚ್ಚಳಕ್ಕೆ ಯೋಜನೆ - ಕೇಂದ್ರ ಸಚಿವ ಪಿಯೂಷ್ ಗೋಯಲ್
5. ಮಹಿಳಾ ಏಕದಿನ ಕ್ರಿಕೆಟ್: ಜಿಂಬಾಬ್ವೆ ವಿರುದ್ಧ ಭಾರತಕ್ಕೆ ೧೨೧ ರನ್‌ಗಳ ಭರ್ಜರಿ ಗೆಲುವು

<><><><>

ನವದೆಹಲಿಯಲ್ಲಿ ಇಂದಿನಿಂದ ಹನ್ನೆರಡನೇ ಬ್ರಿಕ್ಸ್ ಸಂಸದೀಯ ವೇದಿಕೆ ಸಭೆ ಆರಂಭವಾಗಲಿದೆ. 'ಜನಕೇಂದ್ರಿತ ಅಭಿವೃದ್ಧಿಗಾಗಿ ಸಂಸತ್ತುಗಳನ್ನು ಬಲಪಡಿಸುವುದು' ಎಂಬುದು ಈ ಎರಡು ದಿನಗಳ ಸಭೆಯ ವಿಷಯವಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ವಿವಿಧ ನಿಯೋಗಗಳ ನಾಯಕರನ್ನು ಭೇಟಿಯಾಗಲಿದ್ದಾರೆ. ಲೋಕಸಭಾ ಸ್ಪೀಕರ್ ಮತ್ತು ೧೨ನೇ ಬ್ರಿಕ್ಸ್ ಸಂಸದೀಯ ವೇದಿಕೆಯ ಅಧ್ಯಕ್ಷರಾದ ಓಂ ಬಿರ್ಲಾ, ಕಾರ್ಯಕ್ರಮದ ಕಲಾಪಗಳ ಅಧ್ಯಕ್ಷತೆ ವಹಿಸಲಿದ್ದು, ವಿವಿಧ ದೇಶಗಳಿಂದ ಆಗಮಿಸಿರುವ ನಿಯೋಗಗಳ ನಾಯಕರೊಂದಿಗೆ ದ್ವಿಪಕ್ಷೀಯ ಸಭೆಗಳಲ್ಲಿ ಚರ್ಚೆ ನಡೆಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಬ್ರಿಕ್ಸ್‌ನ ೧೧ ಸದಸ್ಯ ರಾಷ್ಟ್ರಗಳು ಮತ್ತು ೧೦ ಪಾಲುದಾರ ರಾಷ್ಟ್ರಗಳನ್ನು ಆಹ್ವಾನಿಸಲಾಗಿದೆ.

<><><><>

೨೦೨೯ ರ ವೇಳೆಗೆ ಭಾರತ, ನಾಲ್ಕು ಕ್ರಿಯಾತ್ಮಕ ಉಡಾವಣಾ ಪ್ಯಾಡ್‌ಗಳೊಂದಿಗೆ ತನ್ನ ಬಾಹ್ಯಾಕಾಶ ಕಾರ್ಯಾಚರಣೆಯನ್ನು ಗಮನಾರ್ಹವಾಗಿ ವಿಸ್ತರಿಸಲಿದೆ ಎಂದು ಇಸ್ರೋ ಅಧ್ಯಕ್ಷ ವಿ.ನಾರಾಯಣನ್ ತಿಳಿಸಿದ್ದಾರೆ. ಉಪಗ್ರಹ ಉಡಾವಣೆಗಳಿಗೆ ಜಾಗತಿಕ ಬೇಡಿಕೆಯನ್ನು ಪೂರೈಸಲು ತಮಿಳುನಾಡಿನ ಟುಟಿಕೋರಿನ್ ಜಿಲ್ಲೆಯ ಕುಲಶೇಖರಪಟ್ಟಣಂನಲ್ಲಿ ೨ ಸಾವಿರ ಎಕರೆ ಮೀಸಲಾದ ಸಣ್ಣ ಉಪಗ್ರಹ ಉಡಾವಣಾ ವಾಹನ-ಎಸ್‌ಎಸ್‌ಎಲ್‌ವಿ ಸಂಕೀರ್ಣ ಮತ್ತು ಶ್ರೀಹರಿಕೋಟಾದಲ್ಲಿ ಮೂರನೇ ಉಡಾವಣಾ ಪ್ಯಾಡ್ ಸೇರಿವೆ ಎಂದು ಅವರು ಮಾಹಿತಿ ನೀಡಿದ್ದಾರೆ. ಚೆನ್ನೈ ಬಳಿಯ ಪೋರೂರ್‌ನಲ್ಲಿರುವ ಖಾಸಗಿ ವಿಶ್ವವಿದ್ಯಾಲಯದ ಘಟಿಕೋತ್ಸವ ಉದ್ದೇಶಿಸಿ ಮಾತನಾಡಿದ ಅವರು, ಮುಂಬರುವ ಕುಲಶೇಖರಪಟ್ಟಣಂ ಬಾಹ್ಯಾಕಾಶ ನಿಲ್ದಾಣ ಸೌಲಭ್ಯವು ಉಡಾವಣಾ

ಪ್ಯಾಡ್‌ಗಳು, ರೈಲು-ಟ್ರ್ಯಾಕ್ ವ್ಯವಸ್ಥೆಗಳು, ಟೆಲಿಮೆಟ್ರಿ, ಟ್ರ್ಯಾಕಿಂಗ್ ಮತ್ತು ಕಮಾಂಡ್ ವ್ಯವಸ್ಥೆಗಳಂತಹ ನಿರ್ಣಾಯಕ ಮೂಲಸೌಕರ್ಯಗಳನ್ನು ಒಳಗೊಂಡಿರುತ್ತದೆ ಎಂದು ತಿಳಿಸಿದ್ದಾರೆ. ಮುಂದಿನ ಎರಡು ತಿಂಗಳೊಳಗೆ ಇಸ್ರೋ, ಮೊದಲ ಸಿಬ್ಬಂದಿ ರಹಿತ ಗಗನಯಾನ ಪರೀಕ್ಷೆಯನ್ನು ನಡೆಸಲು ಯೋಜಿಸಿದೆ. ಈ ಪ್ರಾಥಮಿಕ ಪರೀಕ್ಷೆಗಳು ಪರಿಸರ ನಿಯಂತ್ರಣ, ಸುರಕ್ಷತಾ ವ್ಯವಸ್ಥೆಗಳು, ಕಾರ್ಯವಿಧಾನಗಳು ಮತ್ತು ಮಾಡ್ಯೂಲ್ ಒಳಾಂಗಣಗಳನ್ನು ವಿಭಿನ್ನ ಒತ್ತಡ, ತಾಪಮಾನ ಮತ್ತು ಆರ್ದ್ರತೆಯ ಪರಿಸ್ಥಿತಿಗಳಲ್ಲಿ ಮೌಲ್ಯಮಾಪನ ಮಾಡುತ್ತದೆ ಎಂದು ಹೇಳಿದ್ದಾರೆ. ಈ ಕಾರ್ಯಾಚರಣೆಗಾಗಿ ಇಸ್ರೋ ಸುಮಾರು ೮ ಸಾವಿರ ಭೂ-ಆಧಾರಿತ ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿದೆ ಮತ್ತು ನಾಲ್ವರು ಗಗನಯಾತ್ರಿಗಳು ಪ್ರಸ್ತುತ ವಿಶೇಷ ತರಬೇತಿಯನ್ನು ಪಡೆಯುತ್ತಿದ್ದಾರೆ ಎಂದು ವಿ.ನಾರಾಯಣನ್ ಮಾಹಿತಿ ನೀಡಿದ್ದಾರೆ. ಜಪಾನಿನ ಬಾಹ್ಯಾಕಾಶ ಸಂಸ್ಥೆಯ ಸಹಯೋಗದ ಚಂದ್ರಯಾನ-೫ ಯೋಜನೆಯು ೧೦೦ ದಿನಗಳ ಮೇಲ್ಮೈ ಪ್ರಯೋಗಗಳನ್ನು ನಡೆಸಲು ವಿನ್ಯಾಸಗೊಳಿಸಲಾದ ೩೫೦ ಕೆಜಿ ತೂಕದ  ರೋವರ್ ಅನ್ನು ಒಳಗೊಂಡಿದೆ ಎಂದು ಅವರು ಹೇಳಿದ್ದಾರೆ. ರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆಯನ್ನು ಖಾಸಗೀಕರಣಗೊಳಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ ಇಸ್ರೋ ಅಧ್ಯಕ್ಷರು, ಸಾವಿರಾರು ಉಪಗ್ರಹಗಳಿಗೆ ಹೆಚ್ಚುತ್ತಿರುವ ಜಾಗತಿಕ ಮತ್ತು ದೇಶೀಯ ಬೇಡಿಕೆಗಳನ್ನು ಪೂರೈಸಲು ಖಾಸಗಿ ಸಂಸ್ಥೆಗಳೊಂದಿಗೆ ಪಾಲುದಾರಿಕೆ ಅತ್ಯಗತ್ಯ ಎಂದು ಒತ್ತಿ ಹೇಳಿದ್ದಾರೆ.

<><><><>

ದೇಶದ ಬ್ಯಾಂಕಿಂಗ್ ವ್ಯವಸ್ಥೆಯನ್ನು ಸೈಬರ್ ಭಯೋತ್ಪಾದನೆಯಿಂದ ರಕ್ಷಿಸುವ ಅಗತ್ಯವನ್ನು ಪ್ರಧಾನಿ ನರೇಂದ್ರ ಮೋದಿ ಒತ್ತಿ ಹೇಳಿದ್ದಾರೆ. ಆಧುನಿಕ ಯುದ್ಧಗಳು ಸಾಂಪ್ರದಾಯಿಕ ವಿಧಾನಗಳ ಮೂಲಕ ಮಾತ್ರವಲ್ಲದೆ ಆರ್ಥಿಕತೆಗಳನ್ನು ಗುರಿಯಾಗಿಸಿಕೊಂಡು ಸಹ ನಡೆಯುತ್ತಿವೆ ಎಂದು ಅವರು ಎಚ್ಚರಿಸಿದ್ದಾರೆ. ಒಡಿಶಾದ ಭುವನೇಶ್ವರ ಬಳಿಯ ಜಟ್ನಿಯಲ್ಲಿ ನಿನ್ನೆ ಭಾರತೀಯ ರಿಸರ್ವ್ ಬ್ಯಾಂಕ್‌ನ ದತ್ತಾಂಶ ಕೇಂದ್ರ ಮತ್ತು ಸೈಬರ್ ಸೆಕ್ಯುರಿಟಿ ತರಬೇತಿ ಸಂಸ್ಥೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸುಮಾರು ೧೭೦ ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲಾದ ಈ ದತ್ತಾಂಶ ಕೇಂದ್ರ, ನಿರ್ಣಾಯಕ ಹಣಕಾಸು ದತ್ತಾಂಶದ ಸುರಕ್ಷತೆಯನ್ನು ಬಲಪಡಿಸುತ್ತದೆ ಮತ್ತು ಭಾರತದ ಡಿಜಿಟಲ್ ಹಣಕಾಸು ಮೂಲಸೌಕರ್ಯದ ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಸೈಬರ್ ಸೆಕ್ಯುರಿಟಿ ತರಬೇತಿ ಸಂಸ್ಥೆಯು ಸೈಬರ್ ಸೆಕ್ಯುರಿಟಿ, ಎಂಟರ್‌ಪ್ರೈಸ್ ಕಂಪ್ಯೂಟಿಂಗ್ ಮತ್ತು ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ವಿಶೇಷ ತರಬೇತಿಯನ್ನು ನೀಡುತ್ತದೆ ಮತ್ತು ಸಂಶೋಧನೆಯನ್ನು ಉತ್ತೇಜಿಸುತ್ತದೆ.

<><><><>

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಇಂದಿನಿಂದ ಎರಡು ದಿನ ಆಂಧ್ರಪ್ರದೇಶಕ್ಕೆ ಭೇಟಿ ನೀಡಲಿದ್ದಾರೆ. ಅವರು ವಿಜಯವಾಡದಲ್ಲಿ ಡಾ. ಎನ್.ಟಿ.ಆರ್.ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ೪ಂನೇ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಬಳಿಕ ತಿರುಮಲದ ವೆಂಕಟೇಶ್ವರ ಸ್ವಾಮಿ ದೇವಾಲಯ ಹಾಗೂ ತಿರುಚಾನೂರಿನ ಪದ್ಮಾವತಿ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಲಿದ್ದಾರೆ.

<><><><>

ರಾಜ್ಯ ನೀತಿಯ ಸಾಧನವಾಗಿ ಭಯೋತ್ಪಾದನೆಯನ್ನು ಬಳಸುವುದು ಸಂಪೂರ್ಣವಾಗಿ ಸ್ವೀಕಾರಾರ್ಹವಲ್ಲ ಮತ್ತು ಇದನ್ನು ಎಂದಿಗೂ ಸಮರ್ಥಿಸಿಕೊಳ್ಳಲು ಅಥವಾ ತರ್ಕಬದ್ಧಗೊಳಿಸಲು ಸಾಧ್ಯವಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್.ಜೈಶಂಕರ್ ಪ್ರತಿಪಾದಿಸಿದ್ದಾರೆ. ಎಲ್ಲಾ ರಾಷ್ಟ್ರಗಳು ಈ ಪಿಡುಗಿನ ವಿರುದ್ಧ 'ಶೂನ್ಯ ಸಹಿಷ್ಣುತೆ'ಯನ್ನು ಪ್ರದರ್ಶಿಸದೇ ಇರುವುದರಿಂದಲೇ ಭಯೋತ್ಪಾದನೆ ಮುಂದುವರಿದಿದೆ ಎಂದು ತಿಳಿಸಿದರು. ಈ ಬೆದರಿಕೆಯ ಬಗ್ಗೆ ಜಗತ್ತು ಹೆಚ್ಚು ಜಾಗೃತರಾಗಬೇಕು ಮತ್ತು ಭಯೋತ್ಪಾದನೆಯನ್ನು ಅದರ ಎಲ್ಲಾ ರೂಪಗಳು ಹಾಗೂ ಆಯಾಮಗಳಲ್ಲಿ ಎದುರಿಸಲು ದೃಢ ಸಂಕಲ್ಪದೊಂದಿಗೆ ಒಗ್ಗೂಡಬೇಕು ಎಂದು ಅವರು ಹೇಳಿದರು. ಜಗತ್ತಿನಲ್ಲಿ ನಡೆಯುತ್ತಿರುವ ಸಂಘರ್ಷಗಳ ಹಿನ್ನೆಲೆಯಲ್ಲಿ ಶಾಂತಿಯ ಮಹತ್ವವನ್ನು ತಿಳಿಸಿದ ಅವರು, ಎಲ್ಲಾದರೂ ಯುದ್ಧ ನಡೆದರೆ, ಅದು ಎಲ್ಲೆಡೆ ಶಾಂತಿಗೆ ಬೆದರಿಕೆಯಾಗುತ್ತದೆ ಎಂದು ಎಚ್ಚರಿಸಿದರು.

<><><><>

ಆರ್ಥಿಕ ಬೆಳವಣಿಗೆ ಮತ್ತು ಅಂತಾರಾಷ್ಟ್ರೀಯ ವ್ಯಾಪಾರ ವಿಸ್ತರಣೆಯನ್ನು ಬೆಂಬಲಿಸಲು ಭಾರತ, ೨೦೪೭ ರ ವೇಳೆಗೆ ತನ್ನ ಬಂದರು ಸಾಮರ್ಥ್ಯವನ್ನು ನಾಲ್ಕು ಪಟ್ಟು ಹೆಚ್ಚಿಸಲು ಯೋಜಿಸಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ. ನೆದರ್‌ಲ್ಯಾಂಡ್ಸ್ ಭೇಟಿಯ ಸಂದರ್ಭದಲ್ಲಿ ರೋಟರ್‌ಡ್ಯಾಮ್‌ನಲ್ಲಿ ಮಾತನಾಡಿದ ಅವರು, ಕಳೆದ ದಶಕದಲ್ಲಿ ಭಾರತ, ತನ್ನ ಬಂದರು ಸಾಮರ್ಥ್ಯವನ್ನು ದ್ವಿಗುಣಗೊಳಿಸಿದೆ ಮತ್ತು ಮುಂದಿನ ಎರಡು ದಶಕಗಳಲ್ಲಿ ಅದನ್ನು ನಾಲ್ಕು ಪಟ್ಟು ಹೆಚ್ಚಿಸುವ ಗುರಿ ಹೊಂದಿದೆ ಎಂದು ಹೇಳಿದರು. ಕಡಲ ಮೂಲಸೌಕರ್ಯ, ಹಸಿರು ಶಕ್ತಿ, ಇಂಗಾಲ ಸೆರೆಹಿಡಿಯುವಿಕೆ ಮತ್ತು ಸುಸ್ಥಿರ ವ್ಯಾಪಾರದಲ್ಲಿ ರೋಟರ್‌ಡ್ಯಾಮ್ ಬಂದರಿನೊಂದಿಗೆ ಸಹಕಾರದ ಮಹತ್ವವನ್ನು ಸಚಿವರು ಹೇಳಿದರು. ಸರ್ಕಾರದ ಸಾಗರಮಾಲಾ ಉಪಕ್ರಮದ ಬಗ್ಗೆ ತಿಳಿಸಿದ ಸಚಿವರು, ಬಂದರು ಮೂಲಸೌಕರ್ಯವನ್ನು ವಿಸ್ತರಿಸಲು ಮತ್ತು ಕಡಲ ಸಂಪರ್ಕವನ್ನು ಸುಧಾರಿಸಲು ಪ್ರಯತ್ನಗಳು ನಡೆಯುತ್ತಿವೆ ಎಂದರು.

<><><><>

ವಡೋದರಾದಲ್ಲಿ ನಿನ್ನೆ ನಡೆದ ಮಹಿಳಾ ಕ್ರಿಕೆಟ್ ಸರಣಿಯ ಎರಡನೇ ಏಕದಿನ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ ಭಾರತ, ೧೨೧ ರನ್‌ಗಳ ಭರ್ಜರಿ ಜಯ ದಾಖಲಿಸಿತು.  ಮೂರು ಪಂದ್ಯಗಳ ಸರಣಿಯಲ್ಲಿ ೨-೦ ಮುನ್ನಡೆ ಸಾಧಿಸುವ ಮೂಲಕ ಸರಣಿ ವಶಪಡಿಸಿಕೊಂಡಿತು. ೩೨೯ ರನ್‌ಗಳ ಗುರಿ ಬೆನ್ನತ್ತಿದ ಜಿಂಬಾಬ್ವೆ ೪೮.೫ ಓವರ್‌ಗಳಲ್ಲಿ ೨೦೭ ರನ್‌ಗಳಿಗೆ ಎಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು. ಭಾರತದ ಪರ ವೈಷ್ಣವಿ ಶರ್ಮಾ ನಾಲ್ಕು ವಿಕೆಟ್ ಪಡೆದರೆ, ದೀಪ್ತಿ ಶರ್ಮಾ ಮೂರು ವಿಕೆಟ್ ಪಡೆದರು. ಇದಕ್ಕೂ ಮುನ್ನ ಮೊದಲು ಬ್ಯಾಟ್ ಮಾಡಿದ ಭಾರತ, ನಿಗದಿತ ೫೦ ಓವರ್‌ಗಳಲ್ಲಿ ೬ ವಿಕೆಟ್ ನಷ್ಟಕ್ಕೆ ೩೨೮ ರನ್ ಗಳಿಸಿತು. ಹರ್ಮನ್‌ಪ್ರೀತ್ ಕೌರ್ ೧೨೧ ಎಸೆತಗಳಲ್ಲಿ ೧೨೬ ರನ್ ಗಳಿಸಿದರೆ, ದೀಪ್ತಿ ಶರ್ಮಾ ೮೭ ಎಸೆತಗಳಲ್ಲಿ ೧೦೬ ರನ್ ಗಳಿಸಿ ಅಜೇಯರಾಗಿ ಉಳಿದರು. ಹರ್ಮನ್‌ಪ್ರೀತ್ ಕೌರ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

<><><><>

ಭಾರತದ ಅಗ್ರ ಶ್ರೇಯಾಂಕದ ಡಬಲ್ಸ್ ಆಟಗಾರ ಯುಕಿ ಭಾಂಬ್ರಿ ಮತ್ತು ಅಮೆರಿಕದ ರಯಾನ್ ಸೆಗ್ಗರ್ಮ್ಯಾನ್ ಜೋಡಿ, ಕಝಾಕಿಸ್ತಾನ್‌ದಲ್ಲಿ ನಡೆದ 'ಅಲ್ಮಾಟಿ ಓಪನ್ ಟೆನಿಸ್' ಪ್ರಶಸ್ತಿ ವಿಜೇತರಾಗಿದ್ದಾರೆ. ಎಟಿಪಿ ೨೫೦ ಪಂದ್ಯಾವಳಿಯ ಫೈನಲ್‌ನಲ್ಲಿ, ನಾಲ್ಕನೇ ಶ್ರೇಯಾಂಕದ ಈ ಇಂಡೋ-ಅಮೆರಿಕನ್ ಜೋಡಿಯು, ಆಸ್ಟ್ರಿಯಾದ ಅಗ್ರ ಶ್ರೇಯಾಂಕದ ಆಟಗಾರರಾದ ಲುಕಾಸ್ ಮಿಡ್ಲರ್ ಮತ್ತು ನೀಲ್ ಓಬರ್‌ಲೀಟ್ನರ್ ಅವರನ್ನು ೭-೬, ೬-೭, ೧೦-೨ ಅಂತರದಿಂದ ಸೋಲಿಸಿತು. ಈ ಗೆಲುವಿನೊಂದಿಗೆ, ಭಾಂಬ್ರಿ ೨೦೨೬ರ ಋತುವಿನಲ್ಲಿ ತಮ್ಮ ಮೊದಲ ಎಟಿಪಿ ಟೂರ್ ಪ್ರಶಸ್ತಿಯನ್ನು ಹಾಗೂ ತಮ್ಮ ವೃತ್ತಿಜೀವನದಲ್ಲಿ ಎಟಿಪಿ ಟೂರ್‌ನಲ್ಲಿ ಐದನೇ ಡಬಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>